# ಕನ್ನಡ ಸಾಹಿತ್ಯ ಪರಂಪರೆ ಮತ್ತು ಜನಪರ ಆಲೋಚನ ಕ್ರಮಗಳು

**ಲೋಹಿತ್ ಪಿ.**

ಸಹಾಯಕ ಪ್ರಾಧ್ಯಾಪಕರು, ಡಿ.ವಿ.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಸರ್.ಎಂ.ವಿ. ರಸ್ತೆ, ಶಿವಮೊಗ್ಗ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246380**

## ABSTRACT:

ಕನ್ನಡ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಶ್ರೇಷ್ಠತಮವಾದ ಸಾಹಿತ್ಯ ಪರಂಪರೆಯಿದೆ. ಜನಪರ ಆಲೋಚನಾ ಕ್ರಮಗಳನ್ನು ಹೊಂದಿದ್ದು ಜೀವನಾನುಭವದ ಗಟ್ಟಿ ಸೆಲೆಯೊಂದಿಗೆ ಈ ಮಣ್ಣಿನ ನಾಡಿಮಿಡಿತವನ್ನು ಅರಿಯುವ ಶಕ್ತಿ ಇದೆ. ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಗೆ ತನ್ನದೇ ಆದ ಸ್ವರೂಪ, ಸಂಸ್ಕೃತಿಯ ಮನೋಹಿರಿಮೆ ಹಾಗೂ ಜನಪರ ಆಲೋಚನ ಪರಂಪರೆ ಮತ್ತು ಚಹರೆಗಳಿರುವಂತೆ ಕನ್ನಡ ಸಾಹಿತ್ಯಕ್ಕೂ ಕೂಡ ತನ್ನದೇ ಸಾಮಾಜಿಕ ಆಯಾಮಗಳಿವೆ.

ಒಂದು ನಾಗರಿಕತೆಯ ಪರಂಪರೆಯ ಪ್ರಭಾವಳಿಯಲ್ಲಿ ಬೆಳೆದ ಸಾಹಿತ್ಯ ತನ್ನ ಸಮಾಜದ ನಾಡಿಮಿಡಿತದೊಂದಿಗೆ ಅಗಾಧವಾದ ಜೀವನ ರಸಗಂಗೆಯೊಂದಿಗೆ ಅನಂತಕಾಲ ಪಯಣಿಸಿ; ಹಲವು ಕಾಲಘಟ್ಟದಲ್ಲಿ ಅನಂತ ಬದುಕಿಗೆ ಮಾರ್ಗದರ್ಶಿಯಾಗಿ ತನ್ನೊಡಲನ್ನು ತೆರೆದಿಡುವ ಕೆಲಸ ಮಾಡುತ್ತದೆ. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಅಖಂಡ ಪರಂಪರೆ ಇದೆ. ವಿವಿಧ ಕಾಲ ಘಟ್ಟಗಳ ಸಾಹಿತ್ಯ ಕೊಡುಗೆಗಳಿವೆ. ಸಾಹಿತ್ಯ ಒಂದು ಕಾಲದ ಜೀವನಾನುಭಸಾರ. ಜನಜೀವನದ ಕ್ರಿಯಾಶೀಲತೆಯ ಧ್ಯೋತಕ. ಭಾಷೆಯ ಕಾಲ, ದೇಶ, ಸಮಾಜಗಳಿಗೆ ಅನುಗುಣವಾಗಿ ಬಹುಮುಖಿ ಸಮಾಜವನ್ನು ಕಟ್ಟಿ ಬೆಳೆದು ಬರಬೇಕಾದರೆ ಅದು ತಮ್ಮ ಚಿಂತನೆಗಳಲ್ಲಿ ಹೊಂದಿರಬಹುದಾದ ಸಮಾಜ ಮುಖಿತ್ವದ ಧೋರಣೆಯೇ ಕಾರಣ.

## KEYWORDS:

ಸಾಹಿತ್ಯ ಚಹರೆ, ಕಥಾ ಸಾಹಿತ್ಯ, ಕನ್ನಡ ಭಾಷೆ, ಆಧುನಿಕತೆ, ಮನೋಹಿರಿಮೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತು ಮಾತನಾಡುವ ಎಲ್ಲ ಸಮಯದಲ್ಲಿಯೂ ನಾವು ಮೌಖಿಕ ಪರಂಪರೆಯನ್ನು ಲಕ್ಷಿಸಿದರೂ ಅಭಿಜಾತ ಪರಂಪರೆಯತ್ತ ಗಮನ ಹರಿಸಿದ್ದೇ ಹೆಚ್ಚು. ಪಂಪ ರನ್ನರಿದ್ದ ಕಾಲಕ್ಕೆ ಕ್ಷಾತ್ರಧರ್ಮದ ನಿಲುವುಗಳು ಸಾಮ್ರಜ್ಯ ಸ್ಥಾಪನೆ ಮತ್ತು ವಿಸ್ತರಣೆಯ ಕುರಿತು ಹೆಚ್ಚು ಗಮನ

ಹರಿಸಿದ್ದವು. ಪಂಪ 'ಕರ್ಣ'ನ ಮೂಲಕ ಧರ್ಮ, ಜಾತಿ, ಕುಲಗಳ ಕುರಿತು ಹೊಸ ಬಗೆಯದ್ದೇ ವ್ಯಾಖ್ಯಾನವನ್ನು ನೀಡಿದ. ಎಲ್ಲವನ್ನೂ ಸಾಮರಸ್ಯದಲ್ಲಿ ನೆಲೆಗೊಳಿಸಿ 'ಮನುಷ್ಯಜಾತಿ ತಾನೊಂದೇ ವಲಂ' ಎಂಬಷ್ಟು ವಿಸ್ತಾರತೆಯನ್ನು ಪಡೆಯಲು ಪಂಪನಿಗೆ ಸಾಧ್ಯವಾಯಿತು. ಕೆಡುಕರೆಂದು ಗುರುತಿಸಿಕೊಂಡವರಲ್ಲಿಯೂ ಒಳಿತನ್ನು ಬೆರಳುಮಾಡುವ ಪ್ರಯತ್ನ ಈ ಕಾಲದ ಕವಿವರೇಣ್ಯರಿಂದ ಆಯಿತು. ವ್ಯಕ್ತಿಯ ವ್ಯಕ್ತಿತ್ವದಲ್ಲಿರುವ ಉದಾತ್ತ ಗುಣಗಳನ್ನು ಮುಂಚೂಣಿಗೆ ತರುವ ಅರ್ಥವತ್ತಾದ ಪ್ರಯತ್ನಗಳು ಪಂಪ ರನ್ನರ ಹಾದಿಯಲ್ಲಿ ಸಾಗಿದ ನಾಗಚಂದ್ರ ಹಾಗೂ ಮುಂದಿನದವರಲ್ಲಿಯೂ ಕಾಣಿಸಿಕೊಂಡವು.

ಬೆಟ್ಟು ಮಾಡಿತೋರಿಸುವಷ್ಟು ಜನಪರ ಆಲೋಚನೆಗಳ ಸುಳಿವು ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದು ವಚನ ಕಾಲಘಟ್ಟದಲ್ಲಿ. ಕಲ್ಯಾಣದಲ್ಲಿ ಉಂಟಾದಂತಹ ಕ್ರಾಂತಿ, ಬಸವಣ್ಣ ಇಂತಹ ವಿಚಾರಪರ ವೇದಿಕೆಯ ಮಂಚೂಣಿಯಲ್ಲಿ ನಿಂತುದು ತತ್ಕಾಲೀನ ಸಮಾಜವನ್ನು ವೈಚಾರಿಕತೆಯತ್ತ ಮುಖಮಾಡಿಸಿತು. ಎಲ್ಲರನ್ನೂ ಒಳಗೊಳ್ಳುವ, ಸಾಮಾಜಿಕ ಸಮಸ್ಯೆಗಳಾಗಿ ಮನುಷ್ಯನ ಬದುಕನ್ನು ಕಿತ್ತು ತಿನ್ನುತ್ತಿದ್ದ ಸಂಗತಿಗಳನ್ನು ಪ್ರಶ್ನೆ ಮಾಡುವ, ಟೊಳ್ಳುತನಗಳನ್ನು ಬಯಲಿಗೆಳೆದು ಜನರಲ್ಲಿ ಮೂಢಮತಿಯನ್ನು ನಿರ್ಮೂಲ ಮಾಡುವ ಪ್ರಯತ್ನಗಳು ನಡೆದವು. 'ಎನಗಿಂತ ಕಿರಿಯರಿಲ್ಲ; ಶರಣರಿಗಿಂತ ಹಿರಿಯರಿಲ್ಲ' ಎಂಬಂತಹ ಸಾಲುಗಳು ಮೇಲು-ಕೀಳು, ಹಿರಿ-ಕಿರಿತನಗಳ ಕುರಿತು ಹೊಸ ಭಾಷ್ಯವನ್ನು ಬರೆದವು. ಕಾಯಕತತ್ವ, ದಸೋಹ ಇಂತಹ ಪರಿಕಲ್ಪನೆಗಳು ಮನುಷ್ಯ ಮತ್ತು ಸಮಾಜವನ್ನು ಸುಧಾರಣೆಯ ಕಡೆಗೆ ಕರೆದೊಯ್ದವು.

'ವಚನ ಚಳುವಳಿ ಮತ್ತು ದಾಸ ಸಾಹಿತ್ಯ' ಇವು ಸಮಾಜವನ್ನು ಶುದ್ಧೀಕರಿಸುವ ಬಗೆಯಲ್ಲಿನ ಎರಡು ಮಹತ್ವದ ವೈಚಾರಿಕ ಕವಲುಗಳು. ವಚನ ಚಳವಳಿಯ ಸಂದರ್ಭಕ್ಕೆ ದೇವರು-ಧರ್ಮ-ಆಚರಣೆ ಎಲ್ಲವನ್ನೂ ಪ್ರಶ್ನೆ ಮಾಡುತ್ತಾ ಬಂದರೆ ದಾಸರು ದೇವರನ್ನು ಆರಾಧ್ಯ ದೈವವಾಗಿಸಿಕೊಂಡು ಆ ಮೂಲಕ ಸಮಸ್ಯೆಗಳಿಗೆ, ಸಾಮಾಜಿಕ ಪಿಡುಗುಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಿದರು. 'ಧರ್ಮ' ಎಂಬುದನ್ನು ಅವರು ದಿವ್ಯ ಮಂತ್ರವಾಗಿಸಿಕೊಂಡರು. ಮನುಕುಲದ ಒಳಿತಿಗೆ, ಕಲ್ಯಾಣಕ್ಕೆ ಮೆಟ್ಟಿಲಾಗಿಸಿ ಕೊಂಡರು. ಕುಮಾರವ್ಯಾಸನಂತಹ ಮಹಾಕವಿಯೂ ಸಹ ಭಕ್ತಿರಸವನ್ನು ಪ್ರಧಾನವಾಗಿಸಿಕೊಂಡು ಮಹಾಕಾವ್ಯವನ್ನು ಸೃಷ್ಟಿಸಿದ. ಭಾರತೀಯ ಮನಸ್ಸುಗಳ ನಿಜವಾದ ತುಡಿತವಿರುವ ತಾಣವನ್ನು ಶಕ್ತವಾಗಿಯೇ ಗುರುತಿಸಿಕೊಂಡಿರುವುದನ್ನು ಕುಮಾರವ್ಯಾಸನ ಕಾವ್ಯಾಧ್ಯಯನದಿಂದ ನಾವು ಗ್ರಹಿಸಬಹುದು. ಮನುಷ್ಯನ ಆಸೆಯ ಕಾರಣದಿಂದುಂಟಾಗುವ ಹಲವಾರು ಸಮಸ್ಯೆಗಳ ಕುರಿತು ಪುರಂದರ-ಕಾನಕದಾಸಾದಿಗಳು ನಿಷ್ಠುರವಾಗಿ ಖಂಡಿಸಿರುವುದನ್ನು

ನಾವು ಗ್ರಹಿಸಬಹುದು. ‘ಹೆಣ್ಣು–ಹೊನ್ನು–ಮಣ್ಣು’ ಈ ತ್ರಿವಳ ಆಮಿಷಗಳಿಗೆ ಒಳಗಾಗಿ ಬದುಕನ್ನು ನರಕವಾಗಿಸುವ ಅಪಾಯದ ಕುರಿತು ದಾಸರು ನೀಡಿದ ಸಂದೇಶವು ಸರ್ವಮಾನ್ಯ.

ಆಧುನಿಕ ಸಂದರ್ಭಕ್ಕಂತೂ ದೇವರು, ಧರ್ಮ, ಜಾತಿ ಇವೆಲ್ಲಕ್ಕಿಂತ ವ್ಯಕ್ತಿಯನ್ನು ಮುಖ್ಯನೆಲೆಯಲ್ಲಿ ಗ್ರಹಿಸಲಾಯಿತು. ಶಿಕ್ಷಣವನ್ನು ಪಡೆದಂತಹ ಕವಿಗಳ ಆಲೋಚನಾ ಕ್ರಮ, ಮುಕ್ತವಾಗಿ ಬರೆಯಲು ಅವರಿಗೆದೊರೆತಂತಹ ಅವಕಾಶ, ಆಧುನಿಕ ಜಗತ್ತು ಎಂಬ ಪರಿಕಲ್ಪನೆಯಲ್ಲಿ ಉಂಟಾದಂತಹ ಬದಲಾವಣೆಗಳು ಇವೆಲ್ಲದರ ಫಲಿತಾಂಶಗಳು ನಿಚ್ಚಳವಾಗಿ ಆಧುನಿಕ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ಅನ್ಯಾಯ, ಅಸಮಾನತೆ, ಅವಮಾನಗಳ ನಡುವೆಯೇ ಬದುಕನ್ನು ಸವೆಸುತ್ತಿದ್ದವರು ಶಿಕ್ಷಣದ ಕಾರಣದಿಂದ ಮಾತನಾಡುವ ಶಕ್ತಿಯನ್ನು ಪಡೆದುಕೊಂಡರು. ತಮಗೂ ಒಂದು ಬದುಕಿದೆ ಎಂಬುದನ್ನು ಇಂತಹ ಮಾತುಗಳು ಹಾಗೂ ಬರಹಗಳಿಂದ ಅರಿತುಕೊಂದರು. ಮಾರ್ಕ್ಸ್, ಲೆನಿನ್, ಲಿಂಕನ್, ಗಾಂಧಿ, ಅಂಬೇಡ್ಕರ್ ಮುಂತಾದವರ ವಿಚಾರಗಳು ಜನಜೀವನವನ್ನು ಪ್ರಭಾವಿಸುವುದರ ಜೊತೆಗೆ ಸಾಹಿತ್ಯ ಕೃತಿಗಳಲ್ಲೂ ಆ ಬದಲಾವಣೆಗಳು ದಾಖಲಾದವು. 20ನೇ ಶತಮಾನದ ದ್ವಿತೀಯಾರ್ಧದ ಸಾಹಿತ್ಯವಂತೂ ಕಲ್ಪನೆಗಿಂತ ವಾಸ್ತವತಾ ಚಿತ್ರಣದೆಡೆಗೆ ಹೆಚ್ಚಿನ ಒಲವನ್ನುತೋರಿತು.

ಜನಪದ ಸಾಹಿತ್ಯಕ್ಕೆ ಲೋಕದ ಜನಪರವಾದ ಸಾಂಸ್ಕೃತಿಕ ಮನೋಭೂಮಿಕೆಯನ್ನು ಹೊಂದಿ ಸಮಾಜಮುಖಿತ್ವದ ಆಳಧೋರಣೆಯೊಂದಿಗೆ ತೆರೆದುಕೊಂಡು; ನಮ್ಮ ಮನಸ್ಸುಗಳನ್ನು ತೆರೆಸಿರುವಂತ ಸಾಹಿತ್ಯ ವಿಶಾಲ ಪರಂಪರೆಯೆ ಇದೆ. ‘ಗೋವಿನ ಹಾಡು’ ಇಂಥ ಘನ ಪರಂಪರೆಯ ಅತೀ ದೊಡ್ಡ ವಾರಸುದಾರಿಕೆಯ ಪ್ರತಿನಿಧಿಯಾಗಿ ನಮ್ಮ ಮುಂದೆ ನಿಲ್ಲುತ್ತದೆ. ‘ಮದಗದ ಕೆಂಚಮ್ಮ’ನ ಬಲಿದಾನದ ಪ್ರಸಂಗ ವ್ಯಕ್ತಿ ತನ್ನನ್ನು ತಾನು ಸಮಾಜಕ್ಕೆ ಒಡ್ಡಿಕೊಳ್ಳುವ ಮಾದರಿತನ ನಮಗೆ ಸೋಜಿಗವೆನಿಸುತ್ತದೆ.

**ಕಲ್ಲು ಕೊಟ್ಟವ್ವಂಗೆ ಎಲ್ಲ ಭಾಗ್ಯವು ಬರಲಿ**
**ಮಲ್ಲಿಗೆ ಮುಡಿಯೋ ಸೋಸಿಬರಲಿ/ ಶಿವರಾಯ**
**ಪಲ್ಲಕ್ಕಿ ಮೇಲೆ ಮಗ ಬರಲಿ.**

ಈ ಜಾನಪದ ಗೀತೆ ಜನಪದ ಸಾಹಿತ್ಯ ಪರಂಪರೆಯಲ್ಲಿ ಹೊಂದಿರಬಹುದಾದ ಜನಪರ ಕಾಳಜಿಯನ್ನು ಸಂಕೇತಿಕವಾಗಿ ಅರ್ಥೈಸಬಹುದು.

ಪ್ರಾಚೀನ ಕಾಲದಲ್ಲಿ ಉನ್ನತ ವರ್ಗದ ಸ್ತ್ರೀಯರಿಗೆ ವಿವಿಧ ಗೌರವ ಸ್ಥಾನಮಾನ ನೀಡಲಾಗುತ್ತಿರುವ ಬಗೆ ವಿಜಯನಗರ ಅರಸು ಪ್ರೌಢದೇವರಾಯ ಕಾಲದಲ್ಲಿನ ರಚಿತವಾದ ಹಂಪೆಯ ‘ಲಕ್ಷ್ಮೀಧರಾಮಾತ್ಮನ ಶಾಸನ’ ಕನ್ನಡ ಸಾಹಿತ್ಯ ಪರಂಪರೆ

ಮತ್ತು ಜನಪರ ಆಲೋಚನ ಕ್ರಮಗಳಿಗೆ ಹಿಡಿದ ಬಹುದೊಡ್ಡ ಕನ್ನಡಿ ಎಂದೇ ಹೇಳಬಹುದು.

**ಕೆರೆಯಂ ಕಟ್ಟಿಸು ಬವಿಯಂ ಸವೆಸು**
**ದೇವಾಗರಮಂಮಾಡಿಸು**
**ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು,**
**ಮಿತ್ರರ್ಗಿಂಬುಕೆಯ್ ನಂಬಿದೆರ್ನರೆ ಮಟ್ಟಗಿರು,**
**ಶಿಷ್ಟರಂ ಪೊರೆಯನುತ್ತಿಂತೆಲ್ಲ ವಂದಂದೆತಾಯೆರದಳ್ವಾಲೆರೆವಂದು**
**ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಸನಾ**

ಎಂಬ ಶಾಸನದ ನುಡಿಗಳು ಇಂದಿಗೂ ಜನಪ್ರತಿನಿಧಿಗಳಿಗೆ ಮಾರ್ಗದರ್ಶಿಯಾಗಿ ನಮ್ಮ ಮುಂದಿದೆ.

ಹನ್ನೆರಡನೇ ಶತಮಾನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನದೇ ಆದ ಜನಪರ ಆಲೋಚನೆಗಳೊಂದಿಗೆ ಸಮಾಜದ ನಿಜ ಶುದ್ಧಿಯೆಡೆಗೆ ಸಾಗಿದ ಕಾಲ. ವಚನಗಳ ಮುಖಾಂತರ ಸಮಾಜದ ಮಧ್ಯದಲ್ಲಿ ಅನೇಕ ಸಮಸ್ಯೆಗಳಿಗೆ ಪರಿಹಾರಗಳನ್ನು ನೀಡಲು ಜನರ ಮಧ್ಯೆ ದುಮುಕಿ, ಜನಸಾಮಾನ್ಯರ ಭಾಷೆಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು, ಢಾಂಭಿಕತೆಗಳನ್ನು ಎಳೆ ಎಳೆಯಾಗಿ ಬಿಡಿಸಿ ಶುದ್ಧ ಸಮಾಜದ ನಿರ್ಮಾಣಕ್ಕೆ ಮುಂದಾದ ಸಾಹಿತ್ಯದ ಪರ್ವಕಾಲ.

ಆತ್ಮೋದ್ಧಾರಕ ಹೆದ್ದಾರಿ ಸರ್ವರ ಸ್ವತ್ತಾಗುವಂತೆ ಜನಜಾಗ್ರತಿಯಾಗಬೇಕೆಂಬುದು ವಚನಕಾರರ ಹೆಗ್ಗುರಿ. ಶರಣಶ್ರೇಷ್ಟ ಭಕ್ತಿ ಬಂಡಾರಿ ಬಸವಣ್ಣನವರು 'ಬಹಿರಂಗ ಶುದ್ಧಿ, ಅಂತರಂಗ ಶುದ್ಧಿ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ದಯವಿಲ್ಲದ ಧರ್ಮವಾವುದಯ್ಯ ದಯವೇ ಬೇಕು ಸಕಲ ಪ್ರಾಣಿಗಳಲ್ಲಿ ದಯವೇ ಧರ್ಮದ ಮೂಲವಯ್ಯ' ಎನ್ನುವುದರ ಮೂಲಕ ಸಮಷ್ಟಿಯ ಕಲ್ಯಾಣದ ಉದ್ಧಾರಕ್ಕೆ ಕಂಕಣ ಬದ್ಧರಾಗಿ ದುಡಿದವರು.

**ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ**
**ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ**

ಎನ್ನುವುದರ ವೇದಾಂತ ದಿವ್ಯವಾಣಿಗಳ ಮೂಲಕ ಇಡೀ ವಚನ ಸಾಹಿತ್ಯದ ಜನಪರ ಪ್ರತಿನಿಧಿಯಾಗಿ ಗೋಚರಿಸುತ್ತಾರೆ.

15–16ನೇ ಶತಮಾನದ ಸರ್ವಜ್ಞ ಕವಿ, ಶರಣರು ದಾಸರುಗಳಂತೆ ಧರ್ಮ

ಬೋಧನೆಗೈದವರು. ಜನಜೀವನವನ್ನೆಲ್ಲ ಚಿಕಿತ್ಸದ ದೃಷ್ಟಿಯಿಂದ ವೀಕ್ಷಿಸಿ ಪರಿಹಾರೋಪಾಯಗಳನ್ನು ಜನಮನಕ್ಕೆ ಉಣಬಡಿಸಿದವರು. 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ' 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂಬ ಕವಿವಾಣಿಗಳ ಮೂಲಕ ತಮ್ಮ ಜನಪರ ನಿಲುವುಗಳನ್ನು ಸುಂದರ ತ್ರಿಪದಿಗಳ ಮೂಲಕ ಮನಗಾಣಬಹುದು.

ಹರಿದಾಸ ಸಾಹಿತ್ಯ ಪರಂಪರೆ ಕನ್ನಡ ಸಾಹಿತ್ಯಲೋಕದಲ್ಲಿ ತನ್ನದೇ ಆದ ಶ್ರೇಷ್ಠ ಜನಪರ ಕಾಳಜಿಯನ್ನು ಹೊಂದಿ ಆತ್ಮಸುದ್ಧಿಯ ನೀತಿಬೋಧನೆಗಳ ಮೂಲಕ ಗಹನ ತತ್ವಗಳನ್ನು ಆಧ್ಯಾತ್ಮ ರಹಸ್ಯಗಳನ್ನು ಸರಳ, ಸುಲಭ ರೀತಿಯಲ್ಲಿ ಜನ ಸಾಮಾನ್ಯರಿಗೆ ಅನಾವರಣಗೊಳಿಸಿದ ಬಗೆ ಅದ್ಭುತವಾಗಿದೆ. ಸಂಸ್ಕೃತದಲ್ಲಿದ್ದ ಆಧ್ಯಾತ್ಮಿಕ ತತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆಮನೆಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿ ತೊಡಗಿದ ಅವರ ಜನಪರ ಕಾಳಜಿ ಮೆಚ್ಚುವಂತವುದು. 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಎನ್ನುವ ಕನಕದಾಸರ ನುಡಿ. 'ಈಸಬೇಕು ಇದ್ದು ಜಯಿಸಬೇಕು' ಎನ್ನುವ ಪುರಂದರದಾಸರ ಮಾತುಗಳನ್ನು ನಮ್ಮಲ್ಲಿ ಸಹನೆ ಆತ್ಮವಿಶ್ವಾಸವನ್ನು ಮೂಡಿಸುವ ರೀತಿ ಖುಷಿ ನೀಡುತ್ತದೆ. ಪುರಂದರದಾಸರು ತಮ್ಮ ಕೀರ್ತನಗಳಲ್ಲಿ 'ಮಾನವ ಜನ್ಮ ದೊಡ್ಡದು ಅದನ್ನು ಹಾನಿಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಉಚ್ಚರಿಸಿದ್ದಾರೆ.

ಕನಕದಾಸರ 'ರಾಮಾಧಾನ್ಯ ಚರಿತ್ರೆ' ಯ ಮೂಲಕ ರಾಗಿಯ ಹಿರಿಮೆಯನ್ನು ಎತ್ತಿಹಿಡಿಯುವ ಪ್ರಸಂಗ ಜನಪರ ಕಾಳಜಿಗೆ ಹಿಡಿದ ಕನ್ನಡಿ ಎಂಬಂತಿದೆ. ಇದು ಧ್ವನಿಪೂರ್ಣವಾದ ಒಂದು ವಿಡಂಬನೆಯಂತೆ ತೋರುತ್ತದೆ. ಉತ್ತಮ ಜಾತಿಯವರು ಎನಿಸಿಕೊಂಡವರೂ, ಶ್ರೀಮಂತರೆಸಿಕೊಂಡವರೂ ಅಂತಸ್ಸತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ ಬಹಿರಾಡಂಬರದಿಂದ ಬಾಳತಕ್ಕವರು, ದೈವಕ್ಕೆ ದೂರರಾದವರು ಎಂಬ ಕವಿಯ ನಿಲುವು ತಮ್ಮ ಜನಪರವಾದ ಒಲವನು ಸೂಚಿಸುತ್ತದೆ.

ಸಂಚಿ ಹೊನ್ನಮ್ಮ ತನ್ನ 'ಹದಿಬದಿಯ ಧರ್ಮ'ದಲ್ಲಿ ಹೆಣ್ಣಿನ ಬಗೆಗೆ ನಿಕೃಷ್ಟ ಭಾವವನ್ನು ತೋರಿರುವುದು ನಯವಾಗಿಯೇ ತಿರಸ್ಕರಿಸುವ ಈ ಕೃತಿಯು ಸ್ವಂತ ಸತ್ವದ ಸಹಜ ಪ್ರಾಸವಿದೆ. 'ಸರಸ ಸಾಹಿತ್ಯದ ಪರದೇವತೆ' ಎಂಬ ಬಿರುದಿಗೆ ಭಾಜನಳಾದಂತೆ ಈ ನೀತಿ ಕಾವ್ಯವನ್ನು ಪ್ರಸಾಧಿಕ ವಾಣಿಯಿಂದ ಬರೆದಿದ್ದಾಳೆ. ಈ ಕೃತಿ ಸಂಸಾರ ಧರ್ಮದ ಕೈಪಿಡಿಯೂ ಆಗಿದ್ದು: ಪತಿವ್ರತಾ ಧರ್ಮದ ಸುಖಮಯ ದಾಂಪತ್ಯದ ಸಿರಿಗನ್ನಡಿಯೂ ಆಗಿದೆ.

**ಪೆಣ್ಣಲ್ಲವೆತಮ್ಮನೆಲ್ಲ ಪಡೆದತಾಯಿ**
**ಪೆಣ್ಣಲ್ಲವೆ ಪೊರೆದವಳು**

**ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು**
**ಕಣ್ಣುಕಾಣದ ಗಾವಿಲರು**

**ಕುವರನಾದೊಡೆ ಬಂದಗುಣವೇನದರಿಂದೆ**
**ಕುವರಿಯಾದೊಡೆಕುಂದೇನು?**

ಎಂದು ಸಮಾಜವನ್ನು ಪ್ರಶ್ನಿಸುವ ಬಗೆಯೇ ನಮಗೆ ಸೋಜಿಗವನ್ನುಂಟು ಮಾಡುತ್ತದೆ. ಇಲ್ಲಿ ಹೊನ್ನಮ್ಮಳ ಅಧಿಕಾರವಾಣಿಯ ಮೂಲಕ ತನ್ನ ಹೆಣ್ಣು ತನದ ಧೀಮಂತಿಕೆ ಹಾಗೂ ಹೆಣ್ಣಿನ ಬಗೆಗೆನ ಅವಳ ಜನಪರ ಕಾಳಜಿಯನ್ನು ಕಾಣಬಹುದಾಗಿದೆ.

ಆಧುನಿಕ ಸಾಹಿತ್ಯ ಅಂಕುರಾರ್ಪಣೆಹೊಂದಿ ಸಾಹಿತ್ಯದ ಹೊಸದಿಗಂತವೊಂದು ತೆರೆದುಕೊಂಡಿತು. ನವೋದಯದ ಕಾಲಘಟ್ಟದ ವಿವಿಧ ಕಾಲಘಟ್ಟದಲ್ಲಿ ವಿಭಿನ್ನ ಸಾಹಿತ್ಯರಚನೆಯ ಮೂಲಕ ಕವಿ, ಸಾಹಿತಿಗಳು ಜನಪರ ದೃಷ್ಟಿಕೋನಗಳ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯದ ಕಾಲಘಟ್ಟಗಳು ಗಹನವಾದ ಹೊಸ ಜನಪರವಾದ ಕಾಳಜಿಯ ಪ್ರಪಂಚವನ್ನೇ ತೆರೆದಿಟ್ಟಿವೆ.

ಕುವೆಂಪುರವರ ಸಾಹಿತ್ಯ ನೆಲಜನದ ಸತ್ವದೊಂದಿಗೆ ಒಡಮೂಡಿದ ಸಾಹಿತ್ಯ. ಅವರ ಬಹುಪಾಲು ಸಾಹಿತ್ಯ ಕೃತಿ ಜನಪರವಾದ ನಿಲುವುಗಳಿಂದ ರಚಿತವಾದ ಸಜೀವ ಸಾಹಿತ್ಯದ ಹೊನಲು. ಅವರ 'ಕ್ರಾಂತಿ ಕಾಳಿ' ಕವನದಲ್ಲಿ:

**ಕ್ರಾಂತಿ ಕಾಳಿ ಕಠಾರಿಯಂ ನನ್ನೆದೆಗೆಕುಂತು**
**ಝುಳಪಿಸುತೆ ಬದ್ಧಬ್ರುಕುಟಿಕೋಪದಲಿ ನಿಂತು**
**ಬಡವನಂಗೊಬ್ಬರಂಕತ್ತಿಗುದ್ದಲಿ ಹಾರೆ**
**ಬೆವರು ನೆತ್ತರ್ಗಳಂ ಗಾನಗೈವುದು ನಿನ್ನ**
**ಕರ್ತವ್ಯವೆಂದು ಹಾ! ಹೊಟ್ಟೆಗಿಲ್ಲದೆ ಅನ್ನ**
**ಬಡಜನರು ಸಾಯುತಿದೆರಸಗಂಧವನುತೋರೆ!**

ಎಂಬಲ್ಲಿನ ಭಾವದ ಬಹುಮುಖ್ಯ ಧೋರಣೆ ಜನಪರಚಿಂತನೆಯೇ ಆಗಿದೆ.

**ಕೊನೆಯಪುರೋಹಿತನ ಕರುಳು**
**ಕೊನೆಯದೊರೆಯ ಕೊರಳಿಗುರುಳು**
**ಬಿಗಿಯದಿದ್ದರೆಲ್ಲ ತಿರುಳು ಪೃಥ್ವೀ ಸ್ವಾತಂತ್ರ್ಯಕೆ?**

**ಕರಿಯರದೊ ಬಿಳಿಯರದೊ ಯಾರದಾರೆ ಏನು?**
**ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!**

ಎಂಬಲ್ಲಿ ಕವಿ ಕುವೆಂಪು ಅವರು ಹೊಂದಿರಬಹುದಾದ ಜನಪರ ಕಾಳಜಿ

ನಮಗೆ ಎದ್ದುಕಾಣುತ್ತದೆ.

ಶಿವರಾಮ ಕಾರಂತರ 'ಚೋಮನ ದುಡಿ' ಸಾಮಾಜಿಕ ಕಾಳಜಿಯಿಂದ ಕೂಡಿದ್ದು, ಶೋಷಣೆಗೆ ಒಳಗಾದ ದಲಿತನೊಬ್ಬನ ಬದುಕು, ಚೋಮನ ಬದುಕಿನ ಸುತ್ತ ಹೆಣೆಯಲಾದ ಹಸಿವಿನ, ಅನ್ಯಾಯದ, ಅವಮಾನದ ಕಥೆ. ಸಮಾಜಿಕ ಜನಪರಕಾಳಜಿಗಳನ್ನು ಹೊಂದಿರುವುದರಿಂದಲೇ ಆ ಕೃತಿ ಇನ್ನೂ ಹೊಸ ಹೊಸ ಓದುಗರನ್ನು ತಲುಪಲು ಸಾಧ್ಯವಾಗುತ್ತಿದೆ.

ಸಾಹಿತ್ಯೇತರ ವಿಷಯಗಳನ್ನು ಪ್ರಬುದ್ಧ ರೀತಿಯಲ್ಲಿ ಗದ್ಯ ಬರಹಕ್ಕಿಳಿಸಿರುವವರಲ್ಲಿ ಪೂರ್ಣಚಂದ್ರ ತೇಜಸ್ವಿ, ಲಂಕೇಶ್ ಮುಂತಾದವರ ಲೇಖನಗಳು ಜನಮನಕ್ಕೆ ಮಾರ್ಗದರ್ಶಿತ್ವವನ್ನು ನೀಡಿತು. ಕೃಷಿ, ಪರಿಸರ, ಮಾನವ ಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ತೇಜಸ್ವಿಯವರ ಬರಹಗಳು ಶ್ರೇಷ್ಠ ಗದ್ಯದ ಮಾದರಿಗಳೆನಿಸಿ ಜನಪರವಾದ ನಿಲುವುಗಳಿಂದ ನಮ್ಮ ಮನಗಳನ್ನು ಮುದಗೊಳಿಸಿವೆ.

ಪ್ರಗತಿಶೀಲ ಪಂಥವನ್ನು ಅನುಸರಿಸಿದವರಲ್ಲಿ ತ.ರಾ.ಸುಬ್ಬರಾಯರು, ಬಸರಾಜಕಟ್ಟೀಮನಿ, ನಿರಂಜನ ಮತ್ತು ಚದುರಂಗರ ಸಾಹಿತ್ಯ ಜನಪರವಾದ ಕಾಳಜಿಗೆ ಬಹುಮುಖ್ಯವಾದ ಕೊಡುಗೆಗಳನ್ನು ನೀಡಿವೆ. ನಿರಂಜನ 'ಚಿರಸ್ಮರಣೆ' ಕೃತಿ 'ಕಯ್ಯೂರು ರೈತರ ವೀರಗಾಥೆ'ಯು ಕೇರಳದ ಕಿರುಗ್ರಾಮವಾದ ಕಯ್ಯೂರಿನ ಬಡರೈತರು ಜಮೀನ್ದಾರಿ ವ್ಯವಸ್ಥೆ ಮತ್ತು ಸಾಮ್ರಾಜ್ಯಶಾಯಿಯ ವಿರುದ್ಧ ನಡೆಸಿದ ಹೋರಾಟದ ಬಹುದೊಡ್ಡ ಜನಪರವಾದ ಕಾಳಜಿಯನ್ನು ಸೂಚಿಸುತ್ತದೆ.

ನಿರಂಜನ 'ಕೊನೆಯಗಿರಾಕಿ' ಹಾಗೂ ಆನಂದರವರ 'ನಾ ಕೊಂದ ಹುಡುಗಿ' ಕಥೆಗಳು ವ್ಯವಸ್ಥೆಯ ಕರಾಳ ಮುಖಗಳನ್ನು ತೆರೆದಿಡುವುದರ ಮೂಲಕ ಸಮಾಜಕ್ಕೆ ಹೊಸ ಆಲೋಚನಕ್ರಮದ ಹೆಜ್ಜೆಗುರುತುಗಳನ್ನು ಮೂಡಿಸುವಲ್ಲಿ ಮಾರ್ಗದರ್ಶಿ ಮೈಲಿಗಲ್ಲುಗಳಾಗಿ ನಿಲ್ಲುತ್ತವೆ.

ಆಧುನಿಕ ಕನ್ನಡದ ಸಾಹಿತ್ಯ ಪರಂಪರೆ ಹಾಗೂ ಜನಪರ ಆಲೋಚನ ಕ್ರಮಕ್ಕೆ ದಲಿತ ಹಾಗೂ ಬಂಡಾಯದ ಸಾಹಿತಿಗಳ ಕೊಡುಗೆ ಅನನ್ಯವಾದುದು. ದೇವನೂರು ಮಹಾದೇವ 'ನಮ್ಮ ರಕ್ತ ಪೂರ್ಣ ಸಂವೇದಿಸುವಂತಹದನ್ನೇ ಹಿಡಿಯ ಹೊರಡುವುದು ಇಂದು ಆಗಬೇಕಾದದ್ದು' ಎಂಬ ಗ್ರಹಿಕೆಯಿಂದ ಬರವಣಿಗೆಯಲ್ಲಿ ತೊಡಗಿದವರು. ತಮ್ಮ 'ದ್ಯಾವನೂರು' 'ಒಡಲಾಳ' ಕೃತಿಗಳ ಮೂಲಕ ಸ್ವಂತ ಧ್ವನಿಯೊಂದನ್ನು ಕಂಡುಕೊಂಡು, ಆ ಧ್ವನಿಯನ್ನು ತಮ್ಮ ಸಾಹಿತ್ಯ ಅಭಿವ್ಯಕ್ತಿಗಾಗಿ ಸದೃಢವಾಗಿ ಬಳಸಿಕೊಳ್ಳುತ್ತ, ಸಜೀವ ಭಾಷೇಯ ಮೂಲಕ ತಮ್ಮ ಅನುಭವವನ್ನು ಓದುಗರಿಗೆ ತಲುಪಿಸುವುದರ ಮೂಲಕ ಜನಪರವಾದ ಧ್ವನಿಯನ್ನು ತೆರೆದಿಡುವ ರೀತಿ ಅದ್ಭುತವಾಗಿದೆ.

ದಲಿತ ಕವಿ ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಕವಿತೆ ಸಾಂದರ್ಭಿಕ ಉದಾಹರಣೆಯಾಗಿ ಬಹುಕಾಲ ನಿಲ್ಲಬಲ್ಲ ಮಾದರಿ ಕೃತಿಯಾಗಿ ನಮ್ಮ ಮುಂದಿದೆ.

**ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು**
**ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು**
**ಭಾಷಣಗಳ ಬೆಂಕಿಯಲ್ಲಿ ಬೆಂದರು ಬೂದಿಯಾದೋರು**

ಎಂಬಲ್ಲಿ ಕವಿ ಹೊಂದಿರಬಹುದಾದ ಜನಪರ ಕಾಳಜಿಗಳನ್ನು ಮನಗಾಣಬಹುದು.

ಸಿದ್ಧಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕುಂ. ವೀರಭರಪ್ಪ, ಕಾಳೇಗೌಡ ನಾಗವಾರ ಮುಂತಾದ ಅನೇಕ ಬರಹಗಾರರು ಸಾಮಾಜಿಕ ಕಳಕಳಿಯನ್ನು ಹೊತ್ತು, ಪ್ರತಿಭಟನೆಯ ಗಟ್ಟಿದನಿಗೆ, ಜನಪರ, ಸಾಮಾಜಿಕ, ರಾಜಕೀಯ ಪ್ರಜ್ಞೆಗೆ ಒತ್ತುಕೊಟ್ಟಿದ್ದಾರೆ. ಇವರುಗಳ ಸಾಹಿತ್ಯ ದಲಿತ ಬದುಕಿನ ದಾಖಲೆಗಳಾಗಷ್ಟೇ ಉಳಿಯದೆ ಮಾನವ ಜೀವನದ ದಾಖಲೆಗಳೂ ಆಗಿವೆ ಎಂಬುವುದರಲ್ಲಿ ಅವುಗಳು ಹೊಂದಿರುವ ಜನಪರ ಕಾಳಜಿಯಿಂದ ತಿಳಿದು ಬರುತ್ತದೆ.

ಸಾರಾ ಅಬೂಬಕ್ಕರ್, ಬಾನು ಮುಷ್ತಾಕರಂತಹ ಕಥೆಗಾರ್ತಿಯರು ಮುಸ್ಲಿಮರ ಬದುಕಿನ ಆಂತರಿಕ ವಲಯವನ್ನು, ಆ ಜನಾಂಗದ ಹೆಣ್ಣುಗಳ ಬವಣೆಯ ವಿವಿಧ ಮುಖಗಳನ್ನು ತೆರೆದಿಡುವ ಪಯತ್ನ ಅವರುಗಳು ಹೊಂದಿರುವ ಜನಪರ ಕಾಳಜಿಯನ್ನು ಸೂಚಿಸುತ್ತದೆ.

ಸಾಹಿತ್ಯದಲ್ಲಿ ಬದುಕಿನ ಭಾಷೆಯೇ ಬಹುಮುಖ್ಯ ಅಂಗ. ಸಾಹಿತಿ ತನ್ನ ನಿಜಾನುಭವದ ಅನುಭವ ಮೂಸೆಯಲ್ಲಿ ಅಭಿವ್ಯಕ್ತಿಸಿದ ಸಾಹಿತ್ಯ ಸಮಾಜದ ಆಸ್ತಿಯಾಗಲು ಕಾರಣ ಅದು ಹೊಂದಿರುವ ಜನಪರ ಕಾಳಜಿ. ವ್ಯಕ್ತಿಗತವಾದ ಅನುಭವಕೃತಿಯಲ್ಲಿ ವ್ಯವಸ್ಥೆಗೊಂಡು ಭಾಷೆಯ ಮೂಲಕ ಸಂವಹನ ಸಾಧಿತವಾಗುವ ಬಗೆ ಪರಿಪೂರ್ಣ ಜೀವಸಹಿತ ಕೃತಿಯಾಗಿ ಜನಮಾದರಿಯಾಗುತ್ತದೆ. ಯಾವ ಸಾಹಿತ್ಯ ಜನಪರವಾದ ಮಾದರಿಯಾಗುತ್ತದೆಯೋ ಆ ಸಾಹಿತ್ಯ ಬಹುಕಾಲ ಉಳಿಯುತ್ತದೆ, ಬದುಕುತ್ತದೆ.

ಮನುಷ್ಯ ತನ್ನ ಆಲೋಚನೆಗಳನ್ನು ರೂಪಿಸಿಕೊಂಡು ಸಮಕಾಲೀನ ಸಂದರ್ಭಗಳ ಜೊತೆ ವ್ಯವಹರಿಸಿದ್ದರ ಫಲವಾಗಿ ಹೊಸ ಸಂವೇದನೆಗಳು ಜೀವ ತಳೆದವು. ಹೊಸ ಬಗೆಯ ಆಲೋಚನಾ ಕ್ರಮದಿಂದಲೇ ಹಳೆಯದನ್ನು ಪರಿಷ್ಕರಿಸುವ ಹಾಗೂ ಹೊಸತನ್ನು ನಿರ್ಮಿಸುವ ಪ್ರಕ್ರಿಯೆಗಳು ಜರುಗಿದವು. ಇದರ ಫಲವಾಗಿ ಸೃಜನಶೀಲತೆಯ ಪರಿಧಿಯು ವಿಸ್ತರಿಸಿತು. ಮುಂದುವರೆದು ಭಾವನೆಗಳ ಅಭಿವ್ಯಕ್ತಿಗೆ ಸುಂದರವಾದಂತಹ ಮಾರ್ಗವು ನಿರ್ಮಾಣವಾಯಿತು. ಒಂದು ಕಾಲಕ್ಕೆ ಪಂಡಿತರು

ಎನಿಸಿಕೊಂಡವರ ಪಾಲಿಗೆ ಸೀಮಿತವಾದಂಥ ಆಲೋಚನೆಗಳು ತದನಂತರದಲ್ಲಿ ಬದಲಾವಣೆಗಳ ಫಲವಾಗಿ ಪಾಮರರ ಪ್ರವೇಶಕ್ಕೂ ನಾಂದಿಯನ್ನು ಹಾಡಿತು.

ಹೀಗೆ ಕನ್ನಡ ಸಾಹಿತ್ಯ ಪರಂಪರೆ ತನ್ನದೇ ಆದ ಶ್ರೇಷ್ಟವಾದ ಜನಪರ ಆಲೊಚನ ಕ್ರಮಗಳ ವಿಶಿಷ್ಟವಾದ ಚಹರೆಗಳನ್ನು ಹೊಂದಿರುವುದರಿಂದಲೇ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಘನ ಇತಿಹಾಸವನ್ನು ಹೊಂದಿದ ಶ್ರೀಮಂತ ಸಾಹಿತ್ಯಚರಿತ್ರೆಯಾಗಿ ನಿಂತಿದೆ. ಸಹಸ್ರಾರು ಕವಿಗಳು ತಮ್ಮ ಕೃತಿಗಳಿಂದ ನಮ್ಮ ಸಾಹಿತ್ಯ ಸಾಗರವನ್ನು ವಿಶಾಲಗೊಳಿಸಿದ್ದರೆ. ಕೃತಿಗಳ ವಸ್ತು, ರೀತಿಗಳಲ್ಲಿ ವಿಪುಲವಾದ ವೈವಿಧ್ಯತೆಯನ್ನು ಮೂಡಿಸಲು ಸಾಧ್ಯವಾಗಿದೆ. ಸಾಹಿತ್ಯ ವೃಕ್ಷ ಹೆಮ್ಮರವಾಗಿ ಬೆಳೆದಿದೆ.

**ಪರಾಮರ್ಶನ ಗ್ರಂಥಗಳು:**

1. ಶಾಮರಾಯ ತ. ಸು. (2010). ಕನ್ನಡ ಸಾಹಿತ್ಯ ಚರಿತೆ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ. ಮೈಸೂರು.
2. ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್. (2014). ಕನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
3. ಶೇಷಗಿರಿರಾವ ಎಲ್. ಎಸ್. (1975). ಹೊಸಗನ್ನಡ ಸಾಹಿತ್ಯ ಚರಿತೆ. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
4. ಮುನಿಶಾಮಪ್ಪ ಎ. (2014). ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ. ವಾಣಿ ಪ್ರಕಾಶನ. ಮೈಸೂರು.
5. ಕರೀಗೌಡ ಬೀಚನಹಳ್ಳಿ. (2007). ಸಾಹಿತ್ಯ ವಿಸ್ತಾರ. ಅಜಂತ ಪ್ರಕಾಶನ. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.